ಮಾಹಿತಿ ತಂತ್ರಜ್ಞಾನ ಸೀಟುಗಳು

531 - ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ರಾಜ್ಯಕ್ಕೆ ಮಂಜೂರು ಮಾಡಿರುವ ಹೆಚ್ಚುವರಿ ಮಾಹಿತಿ ತಂತ್ರಜ್ಞಾನ ಸೀಟುಗಳ ಸಂಖ್ಯೆ ಎಷ್ಟು?*

ಆ) *ಪ್ರಥಮ ಹಂತದಲ್ಲಿ ಸೀಟು ಆಯ್ಕೆ ಮಾಡಿಕೊಂಡಿದ್ದ ಅಂಗವಿಕಲ, ಕ್ರೀಡಾ ಮೀಸಲು ವಿದ್ಯಾರ್ಥಿಗಳು ಈ ಮಾಹಿತಿ ತಂತ್ರಜ್ಞಾನ ಹೆಚ್ಚುವರಿ ಸೀಟುಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೂ ಬಂದಿದೆಯೇ?*

ಇ) *ಸೀಟು ವಂಚಿತರಾಗಿರುವ ಅಂಗವಿಕಲ ಹಾಗೂ ಕ್ರೀಡಾ ಮೀಸಲು ವಿದ್ಯಾರ್ಥಿಗಳಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿ ಕೊಡುವುದೇ?*

ಡಾ|| ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) 3755

ಆ) ಬಂದಿದೆ.

ಇ) ಅಂಗವಿಕಲ ಹಾಗೂ ಕ್ರೀಡಾ ಮೀಸಲು ವಿದ್ಯಾರ್ಥಿಗಳ ಅಂತಿಮ ಸುತ್ತಿನ ಪ್ರವೇಶ ಹಂತ ಮುಕ್ತಾಯವಾದ ನಂತರ ಸೀಟುಗಳು ದೊರಕಿರುವುದರಿಂದ ಈ ವರ್ಗದ ಸೀಟುಗಳನ್ನು ಹಂಚಲು ಸಾಧ್ಯವಾಗಿರುವುದಿಲ್ಲ.

ಶ್ರೀ ಎ. ರಾಮದಾಸ್ (ಶ್ರೀ ಡಿ.ವಿ.ಸದಾನಂದಗೌಡ ಅವರ ಪರವಾಗಿ) : ಈ ಸಾಲಿನಲ್ಲಿ ರಾಜ್ಯಕ್ಕೆ ವಿಶೇಷವಾಗಿ ಮಾಹಿತಿ ತಂತ್ರಜ್ಞಾನದ 3755 ಹೆಚ್ಚುವರಿ ಸೀಟುಗಳನ್ನು ಏನು ಕೊಟ್ಟಿದೆ ಅದರಲ್ಲಿ ಮೆರಿಟ್, ಪೇಮೆಂಟ್ ಮತ್ತು ಮ್ಯಾನೇಜ್‌ಮೆಂಟ್ ಕೋಟಾಗಳಲ್ಲಿ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದೀರಿ? ಹಾಗೆಯೇ, ಎರಡನೇ ಪ್ರಶ್ನೆಗೆ ಉತ್ತರವಾಗಿ 'ಅಂತಿಮ ಸುತ್ತಿನ ಪ್ರವೇಶ ಮುಗಿದಿತ್ತು.' ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಅಂತಿಮವಾಗಿ ಪ್ರವೇಶ ಮುಗಿದ ನಂತರದಲ್ಲಿ ಒಂದು ಸೀಟ್ ಮ್ಯಾಟ್ರಿಕ್ಸ್ ಹಾಕಿದಿರಿ. ಅದರಲ್ಲಿ ಎಸ್‌ಸಿ / ಎಸ್‌ಟಿ ಮತ್ತು 2 ಎ ಗೆ ಮೀಸಲಾತಿ ಏನು ಇದೆ ಅದನ್ನು ಕೊಟ್ಟಿದ್ದೀರಿ. ಆದರೆ ಹೊಸ ಮ್ಯಾಟ್ರಿಕ್ಸ್‌ನಲ್ಲಿ ಅಂಗವಿಕಲರಿಗೆ ಮತ್ತು ಕ್ರೀಡಾ ಮೀಸಲು ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಟ್ಟಿಲ್ಲ ಏಕೆ? ಅದರ ಜೊತೆಗೆ ಎಸ್‌ಸಿ / ಎಸ್‌ಟಿ ಮತ್ತು 2(ಎ)ಗೂ ಗ್ರೂಪ್‌ನವರು ಯಾರು ಇದ್ದರು-ಅವರು ಆಗಲೇ ಅಡ್ಮಿಷನ್ ಆಗಿದ್ದರು. ಅಡ್ಮಿಷನ್ ಆದವರಿಗೂ ಕೂಡ ಪುನಃ ಆ ಸೀಟನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿಕೊಟ್ಟಿರುವುದನ್ನು ಇವರಿಗೆ ಏತಕ್ಕೆ ಕೊಟ್ಟಿಲ್ಲ? ಯಾವ ಕ್ರೈಟೀರಿಯಾ ಇಟ್ಟುಕೊಂಡು ಈ ಮ್ಯಾಟ್ರಿಕ್ಸನ್ನು ನೀವು ಹಾಕಿದಿರಿ ಎನ್ನುವುದನ್ನು ಕೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ.

ಡಾ॥ ಜಿ. ಪರಮೇಶ್ವರ : ಮಾನ್ಯ ಅಧ್ಯಕ್ಷರೆ, ಸಿ.ಇ.ಟಿ. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಪ್ರಕಟಣೆ ಮಾಡುವ ಸಂದರ್ಭದಲ್ಲಿ ಯಾವ ಯಾವ ಕ್ಯಾಟಗರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಡಬೇಕು ಎನ್ನುವ ನಿರ್ಣಯವನ್ನು ಮಾಡಿ ಅದನ್ನು ನಾವು ಬ್ರೊಷರ್ ಮೂಲಕ ಮೊದಲೇ ಕಳುಹಿಸಿರುತ್ತೇವೆ. ಯಾವುದೇ ವಿದ್ಯಾರ್ಥಿ ಸಿ.ಇ.ಟಿ. ಪರೀಕ್ಷೆಗೆ ಅರ್ಜಿ ಹಾಕುವಾಗ ಈ ಬ್ರೊಷರನ್ನು ಕೂಡ ನಾವು ಅವರಿಗೆ ಕೊಟ್ಟಿರುತ್ತೇವೆ. ಒಟ್ಟು ಸೀಟುಗಳಲ್ಲಿ ಅಂಗವಿಕಲರಿಗೆ ಮೀಸಲಾತಿ ಮೂರು ಪರ್ಸಂಟ್ ಕೊಡಲಾಗುತ್ತದೆ ಎಂದು ನಾವು ಮೊದಲೇ ಅನೌನ್ಸ್ ಮಾಡಿದ್ದೆವು. ಅದರ ಪ್ರಕಾರ ಅರ್ಜಿಯನ್ನು ಕೂಡ ಕರೆದಿದ್ದೇವೆ. 2000-2001ನೇ ಸಾಲಿನ ಅಡ್ಮಿಷನ್ಸ್‌ನಲ್ಲಿ ನಾವು ಅರ್ಜಿಯನ್ನು ಕರೆದಾಗ ಮೂರು ಪರ್ಸಂಟ್‌ನ ಆಧಾರದ ಮೇಲೆ 123 ಸೀಟುಗಳು ಈ ಅಂಗವಿಕಲರಿಗೆ ಬರುತ್ತದೆ. ಆದರೆ ನಮಗೆ 90 ಅಭ್ಯರ್ಥಿಗಳಿಂದ ಮಾತ್ರ ಅರ್ಜಿಗಳು ಬಂದಿದ್ದವು. ಆ 90 ಅಭ್ಯರ್ಥಿಗಳಿಗೆ ಕೂಡ ನಾವು ಸೀಟನ್ನು ಕೊಟ್ಟಿದ್ದೇವೆ. ಅದರಲ್ಲಿ 53 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೀಟ್ಸನ್ನು ಸೆಲೆಕ್ಟ್ ಮಾಡಿಕೊಂಡಿದ್ದಾರೆ. ಇನ್ನು 70 ಸೀಟುಗಳು ಹಾಗೆಯೇ ಖಾಲಿ ಉಳಿದಿವೆ. ಅಂದರೆ 53 ಸೀಟುಗಳನ್ನು ಕೊಡುವಾಗ ಸಂಬಂಧಪಟ್ಟ ವಿದ್ಯಾರ್ಥಿಗಳು ಯಾವುದನ್ನು ಕೇಳಿದ್ದರೋ ಅದೇ ಸೀಟುಗಳು ಸಿಕ್ಕಿವೆ. ಈ 70 ಉಳಿಕೆ ಸೀಟುಗಳನ್ನು ನಾವು ಜನರಲ್ ಕೋಟಾದಲ್ಲಿ ತೆಗೆದುಕೊಂಡು ಅದನ್ನು ಭರ್ತಿ ಮಾಡಿದ್ದೇವೆ. ಮತ್ತು ಎರಡನೇ ಸಲ ನಮಗೆ 3755 ಸೀಟ್ಸ್ ಐ.ಟಿ.ಗೆ ಮಾತ್ರ ಕೇಂದ್ರ ಸರ್ಕಾರದಿಂದ ಮಂಜೂರು ಆಗಿ ಬಂದಾಗ ಪುನಃ ಇವರನ್ನು ಕರೆಯುವಂಥ ಅವಶ್ಯಕತೆ ನಮಗೆ ಬರಲಿಲ್ಲ. ಏಕೆಂದರೆ ಅರ್ಜಿ ಹಾಕಿದವರು 90 ಜನ ಮಾತ್ರ. ಆ ಕಾರಣಕ್ಕಾಗಿ ನಾವು ಅಂಗವಿಕಲರಿಗೆ ಕೊಡುವುದಕ್ಕೆ ಆಗಲಿಲ್ಲ. ಅಂದರೆ ಅಂಗವಿಕಲರ ಅರ್ಜಿ ಯಾವುದೂ ಇರಲಿಲ್ಲ. ಆದ್ದರಿಂದ ಮುಂದಿನ ವರ್ಷಕ್ಕೆ ಮೂರು ಪರ್ಸೆಂಟ್ ಆಧಾರದ ಮೇಲೆ ಎಷ್ಟು ಜನ ಅಂಗವಿಕಲರು ಬರುತ್ತಾರೋ ಅವರೆಲ್ಲರಿಗೂ ಸೀಟು ಸಿಗುತ್ತದೆ. ಮತ್ತು ತಮ್ಮ ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ, ಈ ವರ್ಷ ನಮ್ಮ ರಾಜ್ಯದಲ್ಲಿ ಈ ಹೆಚ್ಚುವರಿ 3755 ಸೀಟುಗಳು ಸೇರಿ ಅಂದರೆ ಎಲ್ಲಾ ಸಬ್ಜೆಕ್ಟ್‌ಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳು ಸೇರಿ ಒಟ್ಟು 28 ಸಾವಿರಕ್ಕೂ ಹೆಚ್ಚು ಸೀಟುಗಳು ಈ ವರ್ಷದ ಅವಧಿಯಲ್ಲಿ ಆಗಿರತಕ್ಕಂಥಾದ್ದು. ಅದರಲ್ಲಿ 50 ಪರ್ಸೆಂಟ್ ಮೆರಿಟ್ ಮತ್ತು 50 ಪರ್ಸೆಂಟ್ ಪೇಮೆಂಟ್ ಆಧಾರದ ಮೇಲೆ ಮಾಡಿರುವುದಾಗಿದೆ. ಎನ್‌ಆರ್‌ಐ ಕೋಟಾ 5 ಪರ್ಸೆಂಟ್ ಇದ್ದುದನ್ನು 15 ಪರ್ಸೆಂಟ್ ಮಾಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರಿಂದ ಈ ವರ್ಷದಲ್ಲಿ ಆ 15 ಪರ್ಸೆಂಟ್ ಇಂಪ್ಲಿಮೆಂಟೇಷನನ್ನು ಕೂಡ ನಾವು ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ಗೊಂದಲ ಆಗುವಂಥಾದ್ದು ಏನೂ ಕಾಣಲಿಲ್ಲ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ಹಳೆ ಮ್ಯಾಟ್ರಿಕ್ಸ್ ಸಿ.ಇ.ಟಿ. ನಲ್ಲಿ ಬಂದಿತ್ತು. ಹೊಸ ಮ್ಯಾಟ್ರಿಕ್ಸನ್ನು ಸರ್ಕಾರ ಪ್ರಕಟಣೆ ಮಾಡಿದೆ. ಹೊಸ ಮ್ಯಾಟ್ರಿಕ್ಸ್ ಪ್ರಕಾರದಲ್ಲಿ 3755 ಸೀಟ್ಸ್ ಏನಿದೆ ಅದರಲ್ಲಿ ನೀವು ಕ್ಯಾಟಗರಿವೈಸ್ ಎಷ್ಟು ಕೊಟ್ಟಿದ್ದೀರಿ ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ. 2ನೇ ಪ್ರಶ್ನೆಗೆ, ಅಂಗವಿಕಲರನ್ನು ಮತ್ತೆ ಕರೆಯಬೇಕಾದಂಥ ಅವಶ್ಯಕತೆ ಇರಲಿಲ್ಲ ಎಂದು ಹೇಳಿದಿರಿ. ಆದರೆ ಹಳೆಯ ಮ್ಯಾಟ್ರಿಕ್ ಪ್ರಕಾರದಲ್ಲಿ ಎಸ್‌ಸಿ / ಎಸ್‌ಟಿ ಮತ್ತು 2(ಎ)ರವರು ಯಾರು ಅಡ್ಮಿಷನ್ ಆಗಿದ್ದರೋ ಅವರೆಲ್ಲರಿಗೂ ಹೊಸ ಮ್ಯಾಟ್ರಿಕ್ಸ್‌ನಲ್ಲಿ 3755 ಸೀಟು

ಏನು ಇತ್ತು ಆ ಸೀಟಿನಲ್ಲಿ ಪ್ರಾವಿಷನ್ ಮಾಡಿಕೊಟ್ಟಿದ್ದೀರಿ. ಅಡ್ಮಿಷನ್ ಆಗಿದ್ದರೂ ಕೂಡ ಅವರಿಗೆ ಈ ಒಂದು ಸಬ್ಜೆಕ್ಟ್‌ಗೆ ಬರಲಿಕ್ಕೆ ಪ್ರಾವಿಷನ್ ಮಾಡಿಕೊಟ್ಟ ಮೇಲೆ ಅಂಗವಿಕಲರಿಗೆ ಮತ್ತು ಕ್ರೀಡಾ ಮೀಸಲು ವಿದ್ಯಾರ್ಥಿಗಳಿಗೆ ಏಕೆ ಮಾಡಿಕೊಟ್ಟಿಲ್ಲ? ಹೊಸ ಮ್ಯಾಟ್ರಿಕ್ಸ್‌ಗೆ ಅವರ ಹೆಸರನ್ನು ಏಕೆ ಸೇರಿಸಿಲ್ಲ?

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ನಾವು ಅವರಿಗೆ ಆಪ್‌ಷನ್ಸ್ ಕೇಳಿರುತ್ತೇವೆ. ಆಪ್‌ಷನ್ಸ್ ಕೇಳಿದಾಗ 1, 2, 3 ಆಪ್‌ಷೆನ್ಸ್ ಕೊಡುವಾಗ ಅವರಿಗೆ ಎಲ್ಲಾ ಆಪ್‌ಷನ್ಸ್ ಸಿಕ್ಕಿದೆ. 90 ಜನ ಅರ್ಜಿ ಹಾಕಿರುವವರ ಪೈಕಿ 53 ಜನ ಏನು ಅಡ್ಮಿಷನ್ಸ್ ತೆಗೆದುಕೊಂಡಿದ್ದರು ಅವರು ಫಸ್ಟ್ ಆಪ್‌ಷನ್ಸ್ ಏನು ಕೇಳಿಕೊಂಡಿದ್ದರು ಅದರಂತೆ ಅವರಿಗೆಲ್ಲರಿಗೂ ಸಿಕ್ಕಿದೆ. ಆದ್ದರಿಂದ ಮತ್ತೊಂದು ಸಲ ಅವರಿಗೆ ಆಪ್‌ಷನ್ಸ್ ಕೊಡುವಂಥ ಅವಶ್ಯಕತೆ ಬರಲಿಲ್ಲ. ಆ ಕಾರಣಕ್ಕಾಗಿ ಎರಡನೇ ಸಲ ಸೀಟ್ ಮ್ಯಾಟ್ರಿಕ್ಸ್‌ನ್ನು ಕೊಡುವಾಗ ಅವರಿಗೆ ಆ ಒಂದು ಐಟಂನ್ನು ನಾವು ಸೇರಿಸಿಲ್ಲ. ಇನ್ನು ಎಸ್‌ಸಿ : ಎಸ್‌ಟಿ ಮತ್ತು 2 ಎ ಗ್ರೂಪ್‌ನವರಿಗೆ ಏತಕ್ಕೆ ಕೊಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದಿರಿ. ಇವರುಗಳಿಗೆ ಏತಕ್ಕೆ ಕೊಟ್ಟಿದ್ದೇವೆಂದರೆ, ಅವರು ಎರಡನೇ ಆಪ್‌ಷನ್ಸ್, ಮೂರನೇ ಆಪ್‌ಷನ್ಸ್ ಕೊಟ್ಟಿದ್ದಾಗ ಅವರಿಗೆ ಆ ಆಪ್‌ಷನ್ಸ್ ಸಿಕ್ಕಿರಲಿಲ್ಲ. ಫಸ್ಟ್ ಆಪ್‌ಷನ್ಸ್ ಕೇಳಿದ್ದರು ಅವರಿಗೆ ಫಸ್ಟ್ ಆಪ್‌ಷನ್ಸ್ ನಾವು ಕೊಟ್ಟಿದ್ದೇವೆ. ಎರಡನೇ ಆಪ್‌ಷನ್ಸ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಸಿಕ್ಕಿದೆ ಎಂದು ಹೇಳಿ ಇಲ್ಲಿ ಖಾಲಿ ಇರುವಾಗ ಆ ಆಧಾರದ ಮೇಲೆ ನಾವು ಸೀಟ್ ಮ್ಯಾಟ್ರಿಕ್ಸ್‌ಗೆ ಇನ್‌ಕ್ಲೂಡ್ ಮಾಡಿದ್ದೇವೆ ಅಷ್ಟೆ.

ಶ್ರೀ ಎ. ರಾಮದಾಸ್ : ಹೊಸ ಸೀಟ್ಸ್ ಮ್ಯಾಟ್ರಿಕ್ಸ್‌ನಲ್ಲಿ 3755 ಸೀಟುಗಳನ್ನು ಯಾವ ಯಾವುದಕ್ಕೆ ಎಷ್ಟೆಷ್ಟು ಕೊಟ್ಟಿದ್ದೀರಿ?

ಡಾ: ಜಿ. ಪರಮೇಶ್ವರ : ಮಾನ್ಯ ಅಧ್ಯಕ್ಷರೆ, 3755 ಸೀಟುಗಳನ್ನು ಕೂಡ 50 ಪರ್ಸೆಂಟ್ ಮೆರಿಟ್ ಮತ್ತು 50 ಪರ್ಸೆಂಟ್ ಸೀಟ್ಸ್ ಎನ್ನುವ ಆಧಾರದಮೇಲೆ ನಾವು ಕೊಟ್ಟಿರುವುದು. ಅಲ್ಲಿ ಯಾವುದೂ ಬದಲಾವಣೆ ಆಗಿಲ್ಲ. ಅದರಲ್ಲಿ ಕೂಡ 15 ಪರ್ಸೆಂಟ್ ಎನ್‌ಆರ್‌ಐ ಸೀಟ್ಸ್ ಕೊಟ್ಟಿರತಕ್ಕಂಥದ್ದು, ಮತ್ತು ಅಂಗವಿಕಲರಿಗೆ ಕೊಡುತ್ತಿದ್ದ 3 ಪರ್ಸೆಂಟ್ ಸೀಟ್ಸನ್ನು ಕೂಡ ಮೆರಿಟ್‌ಗೆ ಸೇರಿಸಲಾಗಿದೆ. ಆದ್ದರಿಂದ there is no violation of the norms which we have already followed.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದು ಅಂಗವಿಕಲರ ಪ್ರಶ್ನೆ. ನೀವು ಕೊಡಬೇಕಾಗಿರತಕ್ಕಂಥ ಸೀಟುಗಳನ್ನು ಕ್ಯಾಟಗರಿವೈಸ್ ಕೊಟ್ಟಿಲ್ಲ, ಇದರ ಬಗ್ಗೆ ಸರ್ಕಾರಿ ಆಜ್ಞೆ ಕೊಡಿ ಎಂದು ಸಿ.ಇ.ಟಿ.ಯಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬಂದಿದೆ. ಸೀಟ್ ಹಂಚುವಿಕೆಯಲ್ಲಿ ಅವರಿಗೆ ಅನ್ಯಾಯವಾಗಿದೆ. ವಿಶೇಷವಾಗಿ ಅಂಗವಿಕಲರ ಅರ್ಜಿ ಬಂದಿದ್ದರೂ ಕೂಡ ಪರಿಗಣನೆ ಮಾಡಿಲ್ಲ. ಈಗಲೂ ಅವಕಾಶ ಇದೆ. ದಯಮಾಡಿ ಅಂಗವಿಕಲರಿಗೆ ಅವಕಾಶ ಮಾಡಿಕೊಡಿ.

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, that is absolutely wrong. ಒಟ್ಟು 90 ಅರ್ಜಿ ಮಾತ್ರ ಬಂದಿರುವುದು ಎಂದು ನಾನು ಮಾನ್ಯ ಸದಸ್ಯರಿಗೆ ಈಗ ಪುನಃ ಹೇಳಬಯಸುತ್ತೇನೆ.

The Special Officer C.E.T. has written a letter to the Government stating you please include this 3%. ಅರ್ಜಿಗಳೇ ಇಲ್ಲದಿರುವಾಗ ಎಲ್ಲಿಂದ ಸೇರಿಸಬೇಕು?

ಶ್ರೀ ಎ. ರಾಮದಾಸ್ : ಈಗಾಗಲೇ ಅಡ್ಮಿಷನ್ ಆಗಿದ್ದವರಿಗೆ ಪ್ರಾವಿಷನ್ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಅಂಗವಿಕಲರು ಚೇಂಜ್ ಆಫ್ ಸಬ್ಜೆಕ್ಟ್ ಕೇಳಿದ್ದಾರೆ.

Dr. G. PARAMESHWAR : There were only 53 candidates.

ಅಧ್ಯಕ್ಷರು : ಮೊದಲು ಅಂಗವಿಕಲರದು ಎಂದು ಕೇಳಿದಿರಿ, ಆ ಮೇಲೆ ಚೇಂಜ್ ಆಫ್ ಸಬ್ಜೆಕ್ಟ್ ಬಗ್ಗೆ ಕೇಳುತ್ತೀರಿ. ಪ್ರತಿ ಸಲ ನೀವು ವಿಷಯವನ್ನು ಬದಲಾವಣೆ ಮಾಡುತ್ತಿದ್ದೀರಿ. ಆದ್ದರಿಂದ ರಾಮದಾಸ್‌ರವರೇ ತಾವು ಕುಳಿತುಕೊಳ್ಳಿ. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 36ನೇ ಪಟ್ಟಿಯಲ್ಲಿರುವ 142 ಪ್ರಶ್ನೆಗಳ ಪೈಕಿ 122 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ರಾಜ್ಯದಲ್ಲಿ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳ ವಿವರಗಳು

4577 - ಶ್ರೀ ಅಂಗಾರ ಎಸ್ (ಸೂಳ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತಿಯಲ್ಲಿ ಆಯ್ಕೆಯಾಗಿರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಿಗೆ ಯಾವ ವರ್ಗದ ಜನರನ್ನು ಅಧ್ಯಕ್ಷರನ್ನಾಗಿ ಮತ್ತು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ? (ಎಲ್ಲಾ ಪಂಚಾಯತಿಗಳವಾರು ವಿವರ ನೀಡುವುದು)

ಇ) ನೂತನ ಸದಸ್ಯರಿಗೆ ತರಬೇತಿ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಈ) ಸರ್ಕಾರದ ಗೆಜೆಟ್‌ನಲ್ಲಿ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಸೂಚಿಸಲಾದ 6 ವರ್ಗಗಳ ಅಭ್ಯರ್ಥಿಗಳೇ ಅಧ್ಯಕ್ಷ, ಉಪಾಧ್ಯಕ್ಷರಾಗಿಲ್ಲದ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ, ಹಾಗಿದ್ದಲ್ಲಿ ವಿವರ ನೀಡುವುದು; ಇದಕ್ಕೆ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?